**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-380/2022 **DW**-4

**ದಿಃ 27.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎನ್ ಎಚ್ ವಕೀಲರಿಂದಃ**

ನನಗೆ ಓದಲು ಬರುತ್ತದೆ ಆದರೆ ಬರೆಯಲು ಬರುವದಿಲ್ಲ. ನಾನು ಹತ್ತನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ದಿನಾಂಕಃ19.01.2026 ರಂದು ನಾನು ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿದಿದ್ದು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿತ್ತಾ ಎಂದರೆ ಸಾಕ್ಷಿ ಬಂದಿರಲಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿ ಎಂದು ಬಸವಣ್ಣೆಪ್ಪ ರವರು ಕರೆದಿದ್ದರಾ ಎಂದರೆ ಸಾಕ್ಷಿ ಇಲ್ಲ ನಮ್ಮ ವಕೀಲರು ಅಂದರೆ ಬೊಮ್ಮನಹಳ್ಳಿ ವಕೀಲರು ಕರೆದಿದ್ದರು ಎನ್ನುತ್ತಾರೆ. ದಿನಾಂಕಃ19.01.2026 ರಂದು ನಾನು ಹಾಜರುಪಡಿಸಿದ ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಮ್ಮ ವಕೀಲರು ಕೊಟ್ಟರು ಎನ್ನುತ್ತಾರೆ. ನೀವೇನು ಸ್ವಂತ ಮಾಹಿತಿ ಕೊಟ್ಟಿಲ್ಲಾ ಎಂದರೆ ಸಾಕ್ಷಿ ನಾನು ಸಹಿ ಮಾಡಿ ಮಾಡಿರುತ್ತೇನೆ ನನಗೆ ಗೊತ್ತಿದೆ ಎನ್ನುತ್ತಾರೆ. ಸಾಕಿ ಪ್ರಮಾಣ ಪತ್ರಕ್ಕೆ ಕೋರ್ಟನಲ್ಲಿ ಸಹಿ ಮಾಡಿದ್ದೀರಾ ಅಥವಾ ಸಬ್ ರಜಿಸ್ಟರ ಕಡೆ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ರಜಿಸ್ಟರ ಕಡೆ ಎನ್ನುತ್ತಾರೆ. ಸದರಿ ದಾವಾ ಸಲ್ಲಿಸಿರುವವರು ಬಸವಣ್ಣೆಪ್ಪನಿಗೆ ಮೊಮ್ಮಗನಾಗಬೇಕು. ಎಷ್ಟು ಜನ ಮೊಮ್ಮಕ್ಕಳು ಎಂದರೆ ಸಾಕ್ಷಿ ಮೂರು ಮಂದಿ ಎನ್ನುತ್ತಾರೆ. ಆ ಮೂರು ಜನರ ಹೆಸರು ಹೇಳಲು ಬರುತ್ತದಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ವಾದಿಯರು ನ್ಯಾಯಾಲಯದಲ್ಲಿ ಏನು ಮಾಗಣೆ ಮಾಡಿರುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 2019, 2020 , 2021 ರವರೆಗೂ ಕೋರೋನಾ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು 2019 ವರೆಗೆ ಮಾತ್ರ ಇತ್ತು ಎನ್ನುತ್ತಾರೆ. ಬಸವಣೆಪ್ಪ ಕೋರೋನಾದಿದಂದ ಹಾಸಿಗೆ ಹಿಡಿದು ಮನೆಯಲ್ಲಿ ಇದ್ದ ಹೊರಗಡೆ ಅಡ್ಡಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಆರೋಗ್ಯವಾಗಿದ್ದ ಎನ್ನುತ್ತಾರೆ. ಬಸವಣೆಪ್ಪನಿಗೆ ಹೆಣ್ಣು ಮಕ್ಕಳು ಮೂರು ಮಂದಿ ಗಂಡು ಮಕ್ಕಳು ನಾಲ್ಕು ಮಂದಿ. ಮೊದಲನೆಯವರು ಯಲ್ಲಪ್ಪ, ಎರಡನೇದವರು ಮಲ್ಲಪ್ಪ, ಮೂರನೇದವರು ಗುರುಶಿದ್ದಪ್ಪ ನಾಲ್ಕನೇದವರು ರಮೇಶ, ಐದನೇದವರು ಮಹಾದೇವಿ, ಯಲ್ಲವ್ವ ಹಾಗೂ ಬಸಮ್ಮ ಎನ್ನುತ್ತಾರೆ. ಬಸವಣೆಪ್ಪನ ಕುಟುಂಬ ನಮಗೆ ಬಹಳ ಪರಿಚಯ ಎಂದು ಹೇಳಿದ್ದು ಅವರಿಗೆ ಎಷ್ಟು ವಯಸ್ಸು ಇತ್ತು ಎಂದರೆ ಸಾಕ್ಷಿ 70 ವರೆಗೆ ಇತ್ತು ಎನ್ನುತ್ತಾರೆ. ನಾನು 15 ವರ್ಷ ವಯಸ್ಸನಿದ್ದಾಗಿನಿಂದಲೂ ಅವರ ಪರಿಚಯ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ವಾಸ ಹುಬ್ಬಳ್ಳಿಯ ಅಂಬೇಡ್ಕರ ನಗರ. ನಾನು ಬಸವಣೆಪ್ಪರವರ ಜಮೀನಿನಲ್ಲಿ ಕೆಲಸ

ಮಾಡಿದ್ದೇನೆಂದು ಹೇಳಿದ್ದು ಏನು ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಬಿತ್ತುವದು, ಕುಂಟೆ ಹೊಡೆಯುವದು ಮಾಡುತ್ತಿದ್ದೆ ಎನ್ನುತ್ತಾರೆ. ಅಂದರೆ ಅಜ್ಜನ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಸದರಿ ಬಸವಣೆಪ್ಪರವರಿಗೆ ಎಷ್ಟು ಹೊಲ ಇದ್ದವು ಎಂದರೆ ಸಾಕ್ಷಿ 25 ರಿಂದ 27 ಎಕರೆ ಎಂದು ನುಡಿಯುತ್ತಾರೆ. ಅವು ಬೇರೆ ಬೇರೆ ಸರ್ವೆ ನಂಬರನಲ್ಲಿವೆ. ಸದರಿ ಆಸ್ತಿಗಳ ಸರ್ವೆ ನಂಬರ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ರಮೇಶ ರವರ ಜೊತೆ ಹೊಲದಲ್ಲಿ ಕೆಲಸ ಮಾಡಿರುತ್ತೇನೆ. ಸಬ್ ರಜಿಸ್ಟರ ಆಪೀಸಗೆ ದಿನಾಂಕಃ13.11.2020 ರಂದು ಸರ್ವೆ ನಂಃ39/1 ಕ್ಕೆ ಸಂಬಂದಿಸಿದಂತೆ ಸಹಿ ಮಾಡಲು ಹೋಗಿದ್ದೇನು ಅದೇ ರೀತಿ ಮತ್ತೊಂದು ಆಸ್ತಿಯಲ್ಲಿ ಸಹಿ ಮಾಡಲು ಹೋಗಿದ್ದು ಆದರೆ ಅದರ ಸರ್ವೆ ನಂಬರ ಗೊತ್ತಿಲ್ಲ. ಮೇಲೆ ಹೇಳಿದಂತೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲುಃವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**